(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಮಮ್ತಾಜ್)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿ:23-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು : ವಾದಿ ಪರ ಶ್ರೀ. ಸಿ.ಹೆಚ್.ಆರ್ ವಕೀಲರಿಂದ :

27. ನಾನು ಖರೀದಿಸಿರುವ 8 ಸೈಟುಗಳ ಮೇಲೆ ಹಲವಾರು ಸಿವಿಲ್ ದಾವೆಗಳು ಬಾಕಿ ಇವೆ. 8 ಸೈಟುಗಳ ಮೇಲೆ ಈಗ ನಾನು ಇ-ಖಾತಾ ಮಾಡಿಕೊಂಡಿದ್ದೀನಾ ಎಂದರೆ ಸಾಕ್ಷಿ ನಾನು ಕಾರ್ಪೋರೇಷನಿಗೆ ಅರ್ಜಿ ಸಲ್ಲಿಸಿದ್ದು ಅವರು ದಾವೆಗಳು ಮುಗಿದ ನಂತರ ಮಾಡುತ್ತೇವೆ ಎಂದು ನನಗೆ ಹೇಳಿದ್ದಾರೆ ಎಂದು ನುಡಿಯುತ್ತಾರೆ. ನಾನು ಇ-ಖಾತಾ ಕ್ಕೆ ಅರ್ಜಿ ಸಲ್ಲಿಸಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ಸಾಕ್ಷಿ ಮುಂದುವರಿದು ನಾನು ಕಾರ್ಪೋರೇಷನಿಗೆ ಕೇಳಿದಾಗ ಅವರು ದಾವೆ ಮುಗಿಯುವವರೆಗೂ ಹಾಗೂ ಖಾತಾ ಆಗುವುದಿಲ್ಲ ಎಂದು ಹೇಳಿದ ಕಾರಣ ನಾನು ಅರ್ಜಿ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.

28. ದಿನಾಂಕ 31.07.1980 ರಂದು 8 ಸೈಟುಗಳನ್ನು ನಮ್ಮ ಕುಟುಂಬ ಖರೀದಿಸಿದೆ. ಈ 8 ಸೈಟುಗಳಿಗೂ ನನ್ನ ಬಳಿ ಯಾವುದೇ ಪ್ರಾಧಿಕಾರದಿಂದ ನೀಡಿದ ಖಾತಾ ಇಲ್ಲ ಎಂದರೆ ಸಾಕ್ಷಿ ಗ್ರಾಮ ಪಂಚಾಯತಿಯಿಂದ ನೀಡಿದ ಖಾತೆ ನನ್ನ ಬಳಿ ಇದ್ದು ಅದನ್ನು ನಾನು ಬಿಬಿಎಂಪಿಗೆ ಖಾತೆ ತಯಾರಿಸಲು ನೀಡಿದ್ದೇನೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯತಿ ಎಂದರೆ ಉತ್ತರಹಳ್ಳಿ ಗ್ರಾಮ ಪಂಚಾಯತಿ. ಉತ್ತರಹಳ್ಳಿ ಗ್ರಾಮ ಪಂಚಾಯತಿಯಿಂದ ನೀಡಿದ ಖಾತೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಉತ್ತರಹಳ್ಳಿ ಗ್ರಾಮ ಪಂಚಾಯತಿಯಿಂದ ನೀಡಿದ ಖಾತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದೇ ಎಂದರೆ ಸಾಕ್ಷಿ ನಾನು ಅದನ್ನು ಬಿಬಿಎಂಪಿಗೆ ನೀಡಿದ್ದು ಅವರು ನನಗೆ ನೀಡಿದರೆ ನ್ಯಾಯಾಲಯಕ್ಕೆ ಹಾಜರುಪಡಿಸಬಹುದು ಎಂದು ನುಡಿಯುತ್ತಾರೆ. ನಾನು ಯಾವುದೇ ಸೈಟುಗಳ ಸ್ವಾಧೀನದಲ್ಲಿ ಇಲ್ಲ ಮತ್ತು ಆ ಕಾರಣದಿಂದ ನನ್ನ ಬಳಿ ಯಾವುದೇ ಪ್ರಾಧಿಕಾರದಿಂದ ನೀಡಿದ ಖಾತೆಗಳು ಇಲ್ಲ ಎಂದರೆ ಸುಳ್ಳು. 1979-80 ರಲ್ಲಿ ನಾನು ಖರೀದಿಸಿದ ಸೈಟುಗಳು ಭೂಪರಿವರ್ತನೆ ಆಗಿದೆಯೋ ಅಥವಾ ರೆವಿನ್ಯೂ ಸೈಟುಗಳೋ ಎಂದು ನನಗೆ ಗೊತ್ತಿಲ್ಲ. 8 ಸೈಟುಗಳನ್ನು ಖರೀದಿಸುವ ಮೊದಲು ನಾನು ಪಹಣಿ, ಇಂಡೆಕ್ಸು, ಪ್ಲಾನು ಹಾಗೂ ಪಕ್ಕದ ಸೈಟುಗಳ ಮಾಲೀಕರನ್ನು ವಿಚಾರಿಸಿ ನನ್ನ ವಕೀಲರಿಗೆ ತೋರಿಸಿ ಆ ಬಳಿಕ ಖರೀದಿಸಿದ್ದೇನೆ.

29. ನಾನು ಕಂದಾಯ ದಾಖಲೆಗಳನ್ನು ಪರಿಶೀಲಿಸಿ ಸೈಟುಗಳನ್ನು ಖರೀದಿಸಿದ್ದೇನೆ. ನಾನು ಖರೀದಿಸುವ ಸಂದರ್ಭದಲ್ಲಿ ಸದರಿ ಸೈಟುಗಳು ರೆವಿನ್ಯೂ ಸೈಟುಗಳು ಎಂದರೆ ನನಗೆ ಗೊತ್ತಿಲ್ಲ. ಸೈಟುಗಳನ್ನು ಖರೀದಿ ಮಾಡಿದ ನಂತರ ಸದರಿ ಸೈಟುಗಳ ಪಹಣಿಯಲ್ಲಿ ನನ್ನ ಹೆಸರು ಬಂದಿಲ್ಲ.

30. ನಾನು 30 ಗುಂಟೆಯನ್ನು ವಾದಿಯ ಕಡೆಯಿಂದ ದಿನಾಂಕ 18.12.1980 ರಲ್ಲಿ ಖರೀದಿಸಿದ್ದೇನೆ. ಸದರಿ 30 ಗುಂಟೆಯ ಆರ್.ಟಿ.ಸಿ.ಯಲ್ಲಿ ನನ್ನ ಹೆಸರು ಇದೆ. ಇಂದಿಗೂ ಸಹ 30 ಗುಂಟೆಯ ಆರ್.ಟಿ.ಸಿ.ಯಲ್ಲಿ ನನ್ನ ಹೆಸರೇ ಇದೆ. ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಿಕೊಂಡಲು 30 ಗುಂಟೆಯ ಆರ್.ಟಿ.ಸಿ.ಯಲ್ಲಿ ನನ್ನ ಹೆಸರನ್ನು ಬರೆಯಿಸಿಕೊಂಡಿದ್ದೇನೆ ಎಂದರೆ ಸದರಿ ಜಾಗದಲ್ಲಿ ಸಿನಿಮಾ ಥಿಯೇಟರ್ ಇದ್ದ ಕಾರಣ ಭೂಪರಿವರ್ತನೆ ಮಾಡಿಸಿಕೊಂಡು ನನ್ನ ಹೆಸರು ಬರೆಯಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. 30 ಗುಂಟೆ ಜಾಗವನ್ನು ನಾನು ಭೂಪರಿವರ್ತನೆ ಮಾಡಿಸಿಕೊಂಡಿಲ್ಲ ಎಂದರೆ ಸಾಕ್ಷಿ ನಾನು ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಿ ಸದರಿ ದಾಖಲೆಗಳಲ್ಲಿ ಭೂಪರಿವರ್ತನೆ ಮಾಡಿಕೊಂಡ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

31. 1977 ರಿಂದ ಈಗಲೂ ಸಹ ನಾನು ಸದರಿ ಜಾಗದಲ್ಲಿ ಸಿನಿಮಾ ಥಿಯೇಟರ್ ನಡೆಸುತ್ತಿದ್ದೇನೆ. ಸದರಿ ಜಾಗಕ್ಕೆ ನಾನು ಎಷ್ಟು ತೆರಿಗೆ ಪಾವತಿ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಿನಿಮಾ ಥಿಯೇಟರ್ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ನಾನೇ ಸದರಿ ಜಾಗಗಳಿಗೆ ತೆರಿಗೆ ಪಾವತಿ ಮಾಡುತ್ತಿದ್ದೇನೆ ಮತ್ತು ಎಷ್ಟು ಪಾವತಿ ಮಾಡುತ್ತಿದ್ದೇನೆ ಎಂದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ರೆವಿನ್ಯೂ ಆಧಾರದ ಮೇಲೆ ನಾನು ಇಂದಿಗೂ ಸಹ ಸದರಿ ಜಾಗಕ್ಕೆ ಕನಿಷ್ಠ ತೆರಿಗೆ ಪಾವತಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಿನಿಮಾ ಥಿಯೇಟರ್ ನಡೆಸಲು ಬಿಬಿಎಂಪಿಯಿಂದ ಅನುಮತಿ ಪಡೆದಿಲ್ಲ ಎಂದರೆ ಸುಳ್ಳು. 1977 ರಿಂದಲೂ ನನ್ನ ಬಳಿ ಲೈಸೆನ್ಸ್ ಇದೆ. ನ್ಯಾಯಾಲಯಕ್ಕೆ ಅದನ್ನು ಹಾಜರುಪಡಿಸಿದ್ದೆನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಕಳೆದ 5 ವರ್ಷಗಳಿಂದ ನಾನು ಪಾವತಿ ಮಾಡಿದ ತೆರಿಗೆ ರಶೀದಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನನ್ನ ಬಳಿ ಇರುವ ಉಳಿದ 7 ಸೈಟುಗಳ ಆರ್.ಟಿ.ಸಿ.ಯಲ್ಲಿ ನನ್ನ ಹೆಸರು ಇಲ್ಲ. 30 ಗುಂಟೆಯ ಸೈಟನ್ನು ಬಿಟ್ಟರೆ ಬಾಕಿ ಉಳಿದ ಯಾವುದೇ ಸೈಟುಗಳು ನನ್ನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

32. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸಿಸಿಹೆಚ್-28 ರಲ್ಲಿ ಒ.ಎಸ್.1308/1987 ಬಾಕಿ ಇದೆ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೇ ನಂಬರಿನ ತಿದ್ದುಪಡಿಗಾಗಿ ನನ್ನ ಅಧಿಕಾರ ಪತ್ರ ಹೊಂದಿದ ಮಾದಯ್ಯ

ಸದರಿ ದಾವೆಯನ್ನು ಹಾಕಿದ್ದಾರೆ. ದಿನಾಂಕ 09.05.1973 ರಂದು ದಾವಾ ಸ್ವತ್ತಿನ ಕ್ರಯ ಪತ್ರವನ್ನು ವೆಂಕಟಸುಬ್ಬಮ್ಮ ಎಂಬುವವರಿಗೆ ವಾದಿಗಳು ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರದ ಮಾತುಕತೆಯ ಸಂದರ್ಭದಲ್ಲಿ ನಾನು ಇದ್ದಿರಲಿಲ್ಲ. ಅದೇ ರೀತಿ ನನ್ನ ತಂದೆ ಸಹ ಇದ್ದಿರಲಿಲ್ಲ. ಸರ್ವೇ ನಂ.6/2 ವಾದಿಗಳ ಪಿತ್ರಾರ್ಜಿತ ಜಾಗ ಎಂದರೆ ಸರಿಯಲ್ಲ. ಸರ್ವೇ ನಂ.6/2 1 ಎಕರೆ 27 ಗುಂಟೆ ಜಾಗ ವಾದಿಗಳ ಪಿತ್ರಾರ್ಜಿತ ಜಾಗ ಎಂದರೆ ಸರಿಯಲ್ಲ. ಸದರಿ 1 ಎಕರೆ 27 ಗುಂಟೆದಲ್ಲಿಯೇ 10 ಗುಂಟೆ ಜಾಗ (ದಾವಾ ಸ್ವತ್ತನ್ನು) ವಾದಿಗಳು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. 10 ಗುಂಟೆ ಜಾಗವನ್ನು ವೆಂಕಟಸುಬ್ಬಮ್ಮ ಅವರು ವಾದಿಗಳ ಕೈಯಿಂದ ವಾದಿಗಳೇ ಖಾತಾದಾರರು ಎಂದು ಪಡೆದುಕೊಂಡಿದ್ದರು ಎಂದರೆ ಸುಳ್ಳು.

33. ಸರ್ವೇ ನಂಬರು ತಪ್ಪಾಗಿದೆ ಎಂದು ವೆಂಕಟಸುಬ್ಬಮ್ಮ ಅವರು ನನಗೆ ಹೇಳಿದ್ದರು. ವೆಂಕಟಸುಬ್ಬಮ್ಮ ಅವರು ನನಗೆ ಯಾವ ವರ್ಷದಲ್ಲಿ ಈ ವಿಚಾರವನ್ನು ಹೇಳಿದ್ದರು ಎಂದು ನನಗೆ ಜ್ಞಾಪಕ ಇಲ್ಲ. ಸಾಕ್ಷಿ ಮುಂದುವರಿದು 1980 ರಲ್ಲಿ ಇರಬಹುದು ಎಂದು ನುಡಿಯುತ್ತಾರೆ. ವೆಂಕಟಸುಬ್ಬಮ್ಮ ದಾವೆ ನಡೆಸಲು ಮಾದಯ್ಯ ಎಂಬುವವರಿಗೆ ಅಧಿಕಾರ ಪತ್ರ ನೀಡಿದ್ದರು. ದಿನಾಂಕ 17.06.1985 ರಲ್ಲಿ ವೆಂಕಟಸುಬ್ಬಮ್ಮ ದಾವೆ ನಡೆಸಲು ಮಾದಯ್ಯ ಅವರಿಗೆ ಅಧಿಕಾರ ಪತ್ರ ನೀಡಿದ್ದರು. ಸದರಿ ಅಧಿಕಾರ ಪತ್ರವನ್ನು ನಾನು ಓದಿ ನೋಡಿದ್ದೇನೆ. ಸದರಿ ಅಧಿಕಾರ ಪತ್ರದಲ್ಲಿ ದಾವಾ ಸ್ವತ್ತಿನ ಬಗ್ಗೆ ಸರ್ವೇ ನಂಬ್ರವಾಗಲೀ,

ವಿಸ್ತೀರ್ಣವಾಗಲೀ ಅಥವಾ ಚೆಕ್ಕು ಬಂದಿಯಾಗಲೀ ಉಲ್ಲೇಖ ಇಲ್ಲ ಎಂದರೆ ಸುಳ್ಳು. ನಾನು ಸಿನಿಮಾ ಥಿಯೇಟರ್ ಹಾಕಿದ ಸಂದರ್ಭದಲ್ಲಿ ವೆಂಕಟಸುಬ್ಬಮ್ಮ ಅವರು ನನ್ನ ಮೇಲೆ ದಾವೆ ಹಾಕಿದ್ದು ಸದರಿ ದಾವೆ ಹಾಕಿದ ಸಂದರ್ಭದಲ್ಲಿ ನನಗೂ ಹಾಗೂ ಅವರಿಗೂ ಪರಿಚಯ ಆಗಿತ್ತು. ಸದರಿ ಜಿಪಿಎಯಲ್ಲಿ ಒ.ಎಸ್.1308/1987 ರ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಪವರ್ ಆಫ್ ಅಟಾರ್ನಿ ನೀಡಿದ ನಂತರ ದಾವೆ ಹಾಕಿದ್ದೇವೆ ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ತಂದೆ ಜಿಪಿಎಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವೆಂಕಟಸುಬ್ಬಮ್ಮ ಅವರ ವಾರಿಸುದಾರರು ನಾವು ಜಿಪಿಎ ನೀಡಿಲ್ಲ ಎಂದು ಸದರಿ ದಾವೆಯಲ್ಲಿ ಸಾಧನೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾವು ಜಿಪಿಎ ನೀಡಿಲ್ಲ ಎಂದು ಅವರು ಸಾಧನೆ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು 2 ನೇ ವಾದಿ. ವೆಂಕಟಸುಬ್ಬಮ್ಮ ಅವರ ವಾರಿಸುದಾರರು 1 ನೇ ವಾದಿ ಎಂದರೆ ಸರಿ.

34. ಒ.ಎಸ್.1308/1987 ವೆಂಕಟಸುಬ್ಬಮ್ಮ ಅವರ ಪರವಾಗಿ ಡಿಕ್ರಿಯಾಗಿತ್ತು ಎಂದರೆ ಸರಿ. ದಿನಾಂಕ 18.12.2001 ರಲ್ಲಿ ಸದರಿ ದಾವೆ ಡಿಕ್ರಿಯಾಗಿತ್ತು ಎಂದರೆ ಸರಿ. ಸದರಿ ತೀರ್ಪಿನ ವಿರುದ್ಧ ಈ ದಾವೆಯ ವಾದಿಗಳು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್.ಎಫ್.ಎ.358/2002 ರಂತೆ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ದಿನಾಂಕ 14.06.2002 ರಲ್ಲಿ ಒ.ಎಸ್.1308/1987 ರ ಡಿಕ್ರಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸ್ಟೇ ಆಗಿತ್ತು ಎಂದರೆ ಸರಿ. ದಿನಾಂಕ

01.06.2004 ರಂದು ಅಪೀಲುದಾರರ ಪರ ವಕೀಲರು ನ್ಯಾಯಾಲಯದಲ್ಲಿ ಗೈರುಹಾಜರಾದ ಕಾರಣ ಸದರಿ ಅಪೀಲು ವಜಾ ಆಗಿತ್ತು ಎಂದರೆ ಸರಿ. ದಿನಾಂಕ 15.09.2005 ರಲ್ಲಿ ಸದರಿ ಅಪೀಲು ರಿಸ್ಟೋರ್ ಆಗಿದೆ ಎಂದರೆ ಸರಿ. ಸದರಿ ಆರ್.ಎಫ್.ಎ.ಯಲ್ಲಿ ಒ.ಎಸ್.1308/1987 ರಲ್ಲಿ ಆದ ತೀರ್ಪು ವಜಾ ಆಗಿ ರಿಮ್ಯಾಂಡ್ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಲಿಮಿಟೇಷನಿನ ವಿಚಾರದಲ್ಲಿ ಸದರಿ ದಾವೆ ರಿಮ್ಯಾಂಡ್ ಆಗಿದೆ ಎಂದು ನುಡಿಯುತ್ತಾರೆ. ವಾದಿಗಳು ಹಾಕಿದ ಅಪೀಲು ಅವರ ಪರವಾಗಿ ಆಗಿ ವೆಂಕಟಸುಬ್ಬಮ್ಮ ಅವರು ಹಾಕಿದ ದಾವೆ ವಜಾ ಆಗಿ ಆ ಬಳಿಕ ರಿಮ್ಯಾಂಡ್ ಆಗಿದೆ ಎಂದರೆ ಸುಳ್ಳು.

35. ಈಗ ನಾನು ನೋಡುತ್ತಿರುವ ದಾಖಲೆ ಮಾನ್ಯ ಉಚ್ಛ ನ್ಯಾಯಾಲಯವು ಆರ್.ಎಫ್.ಎ.358/2002 ರಲ್ಲಿ ಮಾಡಿದ ತೀರ್ಪು ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಪಿ.7 ಎಂದು ಗುರುತಿಸಲಾಯಿತು.

36. ಸದರಿ ದಾವೆಯಲ್ಲಿ ನನ್ನ ತಂದೆ ಜಿಪಿಎ ಪಡೆದುಕೊಂಡಿದ್ದರೂ ಯಾವತ್ತೂ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಮತ್ತು ಆದೇಶ ಪತ್ರಕ್ಕೆ ಸಹಿ ಹಾಕಿಲ್ಲ ಎಂದರೆ ಸುಳ್ಳು. ಸದರಿ ದಾವೆಯಲ್ಲಿ ನನ್ನ ತಂದೆ ಇಲ್ಲಿಯವರೆಗೂ ಯಾವುದೇ ಸಾಕ್ಷಿ ನೀಡಿಲ್ಲ ಎಂದರೆ ಸುಳ್ಳು. ಸದರಿ ದಾವೆಯಲ್ಲಿ ನಾನೇ ಹಾಜರಾಗಿ ನಾನೇ ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ಸದರಿ ದಾವೆಯಲ್ಲಿ ನಾನೇ 2 ನೇ ವಾದಿಯಾದ ಕಾರಣ ನಾನೇ ಸಾಕ್ಷಿ

ನೀಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಅಕ್ಕಯ್ಯಮ್ಮ ಅವರ ಅಧಿಕಾರ ಪತ್ರ ಪಡೆದ ಕಾರಣ ನನ್ನ ತಂದೆಗೆ ಆ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸುಳ್ಳು.

37. ನನ್ನ ತಂದೆ 2004 ರಲ್ಲಿ ತೀರಿಹೋಗಿದ್ದರು. 2004 ರಲ್ಲಿ ನನ್ನ ತಂದೆ ತೀರಿಹೋದ ನಂತರ ವೆಂಕಟಸುಬ್ಬಮ್ಮ ಅವರ ಮನೆಯವರಿಂದ ನಾನು ಜಿಪಿಎ ಪಡೆದುಕೊಂಡಿದ್ದೀನಾ ಎಂದರೆ ಸಾಕ್ಷಿ 2004 ರಲ್ಲಿ ನಾನು ಸದರಿ ಜಾಗವನ್ನು ಖರೀದಿಸಿದ ನಂತರ 2 ನೇ ವಾದಿಯಾಗಿ ಮುಂದುವರೆದಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಈ ದಾವೆಯಲ್ಲಿದ್ದ ದಾವಾ ಸ್ವತ್ತನ್ನು ನಾನು ಖರೀದಿಸಿದ್ದೇನೆ ಎಂದು ನುಡಿಯುತ್ತಾರೆ. ದಿನಾಂಕ 07.07.2004 ರಂದು ನಾನು ದಾವಾ ಸ್ವತ್ತನ್ನು ಖರೀದಿಸಿದ್ದೇನೆ. ವೆಂಕಟಸುಬ್ಬಮ್ಮ ಅವರ ಪವರ್ ಆಫ್ ಅಟಾರ್ನಿ ಹೋಲ್ಡರ್ ಆಗಿ ಮಾದಯ್ಯ ಅವರ ಕಡೆಯಿಂದು ನಾನು ದಿನಾಂಕ 07.07.2004 ರಂದು ದಾವಾ ಸ್ವತ್ತನ್ನು ಖರೀದಿಸಿದ್ದೇನೆ. ದಾವಾ ಸ್ವತ್ತನ್ನು ನಾನು ಖರೀದಿಸುತ್ತಿದ್ದೇನೆ ಎಂದು ವೆಂಕಟಸುಬ್ಬಮ್ಮ ಅವರ ಕುಟುಂಬದವರಿಗೆ ನಾನು ಹೇಳಿದ್ದೇನಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.